# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 202 (219) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-12-2021 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಿಂದ ಕಲಬುರಗಿ ಮಹಾನಗರಪಾಲಿಕೆಗೆ ವಿವಿಧ ಯೋಜನೆಯಡಿ ಬಿಡುಗಡೆಯಾದ ಅನುದಾನವೆಷ್ಟು; ವೆಚ್ಚ ಮಾಡಿರುವ ಅನುದಾನ ಎಷ್ಟು; (ವಿವರ ನೀಡುವುದು) | 1. ಕಳೆದ ಮೂರು ವರ್ಷಗಳಿಂದ ಕಲಬುರಗಿ ಮಹಾನಗರ ಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ರೂ.3363.13 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.2355.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.<br><br>2. ಕಲಬುರ್ಗಿ ಮಹಾನಗರ ಪಾಲಿಕೆಗೆ ಕಳೆದ 3 ವರ್ಷಗಳಲ್ಲಿ 14ನೇ ಮತ್ತು 15ನೇ ಹಣಕಾಸು ಆಯೋಗದ ಅನುದಾನದಡಿ ಬಿಡುಗಡೆಯಾದ ಅನುದಾನದ ವಿವರ ಮತ್ತು ವೆಚ್ಚ ಮಾಡಲಾದ ವಿವರ ಈ ಕೆಳಕಂಡಂತಿವೆ. |

(ರೂ. ಲಕ್ಷಗಳಲ್ಲಿ)

| ಅನುದಾನ/ ಯೋಜನೆ | ಸಾಲು | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|
| 14ನೇ ಹಣಕಾಸು ಆಯೋಗದ ಅನುದಾನ | 2018-19 | 2192.00 | 1552.51 |
| | 2019-20 | 2946.69 | 2082.92 |
| 15ನೇ ಹಣಕಾಸು ಆಯೋಗದ ಅನುದಾನ | 2020-21 | 3026.00 | 859.80 |
| ಅಮೃತ್ ಯೋಜನೆ | 2015-16 ರಿಂದ 2021-22 | 17231.00 | 17152.00 |

3. ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಕಲಬುರ್ಗಿ ಮಹಾನಗರ ಪಾಲಿಕೆಗೆ ಯೋಜನಾ ಅವಧಿಗೆ (2015-16 ರಿಂದ 2021-22) ಅನುಮೋದನೆಯಾದ ಅನುದಾನದ ಅನುಪಾತವಾರು, ಕೇಂದ್ರ 50%, ರಾಜ್ಯ 20%, ನ.ಸ್ಥ.ಸಂ 30% ರಂತೆ ಒಟ್ಟು ಅನುದಾನ ರೂ.172.36 ಕೋಟಿಗಳು ಮಂಜೂರಾಗಿದ್ದು, ಈವರೆವಿಗೆ ಒಟ್ಟು ಅನುದಾನ ರೂ.172.31 ಕೋಟಿ ಈವರೆವಿಗೂ ಬಿಡುಗಡೆಯಾಗಿದೆ ಮತ್ತು ರೂ.171.52 ಕೋಟಿಗಳು ವೆಚ್ಚವಾಗಿರುತ್ತದೆ.

4. ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ ಯೋಜನೆಯಡಿ ಕಲಬುರ್ಗಿ ಮಹಾನಗರ ಪಾಲಿಕೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚ ಮಾಡಲಾದ

<table>
<tr>
<td></td>
<td></td>
<td>ಅನುದಾನದ ವಿವರಗಳು ಈ ಕೆಳಕಂಡಂತಿವೆ:<br>(ರೂ ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಬಿಡುಗಡೆ ಮಾಡಿರುವ ಅನುದಾನ</th><th>ವೆಚ್ಚ ಮಾಡಲಾದ ಅನುದಾನ</th></tr>
<tr><td>2018-19</td><td>15.13</td><td>15.13</td></tr>
<tr><td>2019-20</td><td>272.53</td><td>272.53</td></tr>
<tr><td>2020-21</td><td>817.08</td><td>371.76</td></tr>
<tr><td>ಒಟ್ಟು</td><td>1104.74</td><td>659.42</td></tr>
</table>
5. ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಮಹಾನಗರ ಪಾಲಿಕೆಗೆ ಎಸ್.ಎಫ್.ಸಿ ಮುಕ್ತನಿಧಿ/ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಮಂಜೂರಾದ / ಬಿಡುಗಡೆಯಾದ ಹಾಗೂ ವೆಚ್ಚವಾದ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td>
</tr>
<tr>
<td>ಆ)</td>
<td>ಬಿಡುಗಡೆಯಾದ ಅನುದಾನದಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು; (ಕಾಮಗಾರಿ ಸಹಿತ ಸಂಪೂರ್ಣ ವಿವರ ನೀಡುವುದು)</td>
<td>1. ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಪೂರ್ಣಗೊಳಿಸಿದ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br><br>14ನೇ ಹಣಕಾಸು ಆಯೋಗದ ಅನುದಾನದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಕೈಗೊಂಡ 201 ಕಾಮಗಾರಿಗಳಲ್ಲಿ 167 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಬಾಕಿ ಇರುವ 34 ಕಾಮಗಾರಿಗಳ ಪ್ರಗತಿಯಲ್ಲಿವೆ. ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.<br><br>2. 15ನೇ ಹಣಕಾಸು ಆಯೋಗದ ಅನುದಾನದಡಿ ಕೈಗೊಂಡ 176 ಕಾಮಗಾರಿಗಳಲ್ಲಿ 48 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ಉಳಿದಿರುವ ಕಾಮಗಾರಿಗಳ ಸಂಖ್ಯೆ: 128, ಇದರಲ್ಲಿ 124 ಕಾಮಗಾರಿಗಳು ಪ್ರಗತಿಯಲ್ಲಿವೆ 2 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ ಮತ್ತು 2 ಕಾಮಗಾರಿಗಳಿಗೆ ಟೆಂಡರ್ ಕರೆಯಲು ಬಾಕಿ ಇದೆ. ಕಾಮಗಾರಿಗಳ ವಿವರಗಳ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ.<br><br>3. ಅಮೃತ್ ಯೋಜನೆ: ಮಹಾನಗರ ಪಾಲಿಕೆ ವತಿಯಿಂದ ಕೈಗೊಂಡ 5 ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೊಂಡ 1 ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳು ಪೂರ್ಣಗೊಂಡಿವೆ ಕಾಮಗಾರಿಗಳ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಿದೆ.<br><br>4. ಸ್ವಚ್ಛ ಭಾರತ ಯೋಜನೆಯಡಿ ಕಲಬುರ್ಗಿ ಮಹಾನಗರ</td>
</tr>
</table>